**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತನಾಲ್ಕನೆಯ ಅಧಿವೇಶನ**

# ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ)ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–46)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾವಾದ ರೂಪದಲ್ಲಿ)**

ಚಾಣಕ್ಯ ವಿಶ್ವವಿದ್ಯಾಲಯ ಅಧಿನಿಯಮ, 2021ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಚಾಣಕ್ಯ ವಿಶ್ವವಿದ್ಯಾಲಯ ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 26ನೇ ಪ್ರಕರಣದ ತಿದ್ದುಪಡಿ.-** ಚಾಣಕ್ಯ ವಿಶ್ವವಿದ್ಯಾಲಯ ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ರ 26ನೇ ಪ್ರಕರಣದಲ್ಲಿ,-

(1) ಉಪ-ಪ್ರಕರಣ (1)ರ, ಖಂಡ(viii)ರ ತರುವಾಯ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

" (ix) ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಆಡಳಿತವನ್ನು ಒಳಗೊಂಡಂತೆ ವ್ಯವಸ್ಥಾಪನೆ ಅಥವಾ ಹಣಕಾಸು ಅಥವಾ ಯಾವುದೇ ಇತರೆ ವಿಶೇಷ ಕ್ಷೇತ್ರದಿಂದ ಒಬ್ಬ ತಜ್ಞರು. "

(2) ಉಪ ಪ್ರಕರಣ (3)ರಲ್ಲಿ, "ಇಬ್ಬರು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಚಾಣಕ್ಯ ವಿಶ್ವವಿದ್ಯಾಲಯ ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ನ್ನು ರಾಜ್ಯ ಸರ್ಕಾರದ ಮೂಲಕ ಸಂಬಂಧಪಟ್ಟ ಕ್ಷೇತ್ರದಿಂದ ಒಬ್ಬ ವಿಶೇಷ ತಜ್ಞರನ್ನು ಆಡಳಿತ ಮಂಡಳಿಗೆ ನಾಮನಿರ್ದೇಶಿಸಲು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಂ.ಸಿ. ಸುಧಾಕರ್**
ಉನ್ನತ ಶಿಕ್ಷಣಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**
**ಚಾಣಕ್ಯ ವಿಶ್ವವಿದ್ಯಾಲಯ ಅಧಿನಿಯಮ, 2021**
**(2021ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ರ ಉದ್ಧೃತಭಾಗ**

**XXX XXX XXX**

**26. ಆಡಳಿತ ಮಂಡಳಿ .-** (1) ಆಡಳಿತ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಾಧಿಪತಿಯವರು - ಅಧ್ಯಕ್ಷರು;

(ii) ಸಹ-ಕುಲಾಧಿಪತಿಯವರು - ಸದಸ್ಯರು;

(iii) ಕುಲಪತಿಯವರು - ಸದಸ್ಯರು;

(iv) ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತರು - ಪದನಿಮಿತ್ತ ಸದಸ್ಯರು;

(v) ಪ್ರಾಯೋಜಿಕ ಸಂಸ್ಥೆ ನಾಮ ನಿರ್ದೇಶನ ಮಾಡಿದ ಆಡಳಿತವನ್ನು ಒಳಗೊಂಡಂತೆ, ಕೈಗಾರಿಕ ಕ್ಷೇತ್ರದಿಂದ ಅಥವಾ ವ್ಯವಸ್ಥಾಪನೆ, ಹಣಕಾಸು ಅಥವಾ ಯಾವುದೇ ಇತರ ವಿಶೇಷ ಕ್ಷೇತ್ರದಿಂದ ಬಂದಿರುವ ಒಬ್ಬರು ತಜ್ಞರು - ಸದಸ್ಯರು;

(vi) ಪ್ರಾಯೋಜಿಕ ಸಂಸ್ಥೆ ನಾಮ ನಿರ್ದೇಶನ ಮಾಡಿದ ಐವರು ಸುಪ್ರಸಿದ್ಧ ವ್ಯಕ್ತಿಗಳು - ಸದಸ್ಯರು;

(vii) ಸಹ ಕುಲಪತಿಯವರು ಮತದಾನದ ಹಕ್ಕಿಲ್ಲದ ಸದಸ್ಯರಾಗಿರತಕ್ಕದ್ದು; ಮತ್ತು

(viii) ವಿಶ್ವವಿದ್ಯಾಲಯ ಅನುದಾನ ಆಯೋಗದ ನಾಮನಿರ್ದೇಶಿತ ಒಬ್ಬ ಪ್ರಸಿದ್ಧ ಶಿಕ್ಷಣ ತಜ್ಞರು - ಸದಸ್ಯರು.

(2) ಕುಲಸಚಿವರು ಆಡಳಿತ ಮಂಡಳಿಯ ಮತದಾನದ ಹಕ್ಕಿರದ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಆಡಳಿತ ಮಂಡಳಿಯ ಸದಸ್ಯರ ಪದಾವಧಿ, ಸರ್ಕಾರದಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ನೇಮಕಾತಿ, ನವೀಕರಣ ಮತ್ತು ತೆಗೆದುಹಾಕುವುದು ಮುಂತಾದವುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಆಡಳಿತ ಮಂಡಳಿಯ ಎಲ್ಲಾ ಸಭೆಗಳಲ್ಲಿ ಕುಲಾಧಿಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಕುಲಾಧಿಪತಿಯವರಿಂದ ನಾಮನಿರ್ದೇಶಿತರಾದ ಯಾರಾದರೂ ಒಬ್ಬರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ಕುಲಾಧಿಪತಿಯವರು ಯಾವೊಬ್ಬ ವ್ಯಕ್ತಿಯನ್ನೂ ನಾಮನಿರ್ದೇಶನ ಮಾಡಿರದಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ಸರಳ ಬಹುಮತದ ಮೂಲಕ ಅವರುಗಳ ಪೈಕಿಯಿಂದಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಆ ವ್ಯಕ್ತಿಯು ಆ ಸಭೆಗೆ ಮಾತ್ರವೇ ಅಧ್ಯಕ್ಷನಾಗಿರತಕ್ಕದ್ದು;

(5) ಆಡಳಿತ ಮಂಡಳಿಯ ಎಲ್ಲಾ ಸಭೆಗಳಿಗೆ, ಅಂಥ ಸಭೆಯಲ್ಲಿ ಹಾಜರಾಗುವ ಮತ್ತು ಮತದಾನ ನೀಡುವ ಐದು ಜನ ಸದಸ್ಯರು ಕೋರಂ ಆಗಿರತಕ್ಕದ್ದು:

ಪರಂತು, ಆಡಳಿತ ಮಂಡಳಿಯ ಯಾವುದೇ ಸಭೆಯ ಕೋರಂ ಪೂರ್ಣವಾಗಬೇಕಾದರೆ ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ಒಬ್ಬ ನಾಮನಿರ್ದೇಶಿತರು ಹಾಜರಿರುವುದು ಮತ್ತು ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ನಾಮನಿರ್ದೇಶಿತರ ಅನುಪಸ್ಥಿತಿಯಲ್ಲಿ ಕುಲಪತಿಯವರು ಹಾಜರಿರುವುದು ಯಾವಾಗಲೂ ಅವಶ್ಯವಾಗಿರತಕ್ಕದ್ದು.

(6) ಆಡಳಿತ ಮಂಡಳಿಯು ವಿಶ್ವವಿದ್ಯಾಲಯದ ಪ್ರಧಾನ ಆಡಳಿತ ಸಂಸ್ಥೆಯಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯವು ಅನುಸರಿಸಬೇಕಾದ ಕಾರ್ಯನೀತಿಗಳನ್ನು ರಚಿಸುವುದು;

(ii) ಈ ಅಧಿನಿಯಮದ ಅಥವಾ ಪರಿನಿಯಮಗಳ ಅಥವಾ ನಿಯಮಗಳ, ಉಪಬಂಧಗಳು ಅಥವಾ ಆರ್ಡಿಯನ್ಸ್ ಗಳಿಗೆ ಅನುಗುಣವಾಗಿ ಇರದ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ತೀರ್ಮಾನಗಳನ್ನು ಪುನರ್ ಪರಿಶೀಲಿಸುವುದು;

(iii) ವಿಶ್ವವಿದ್ಯಾಲಯದ ಆಯವ್ಯಯ ಮತ್ತು ವಾರ್ಷಿಕ ವರದಿಗಳನ್ನು ಅನುಮೋದಿಸುವುದು;

(iv) ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸುವುದು ಅಥವಾ ಈಗಾಗಲೇ ಇರುವ ಪರಿನಿಯಮಗಳು ಮತ್ತು ನಿಯಮಗಳನ್ನು ಮತ್ತು ಆರ್ಡಿನೆನ್ಸ್ ಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(v) ಪ್ರಾಯೋಜಿತ ಸಂಸ್ಥೆಗೆ ವಿಶ್ವವಿದ್ಯಾಲಯದ ಸ್ವಯಂ ಸಮಾಪನಕ್ಕೆ ಶಿಫಾರಸ್ಸು ಮಾಡುವುದು.

(vi) ಸರ್ಕಾರಕ್ಕೆ ಸಲ್ಲಿಸಬೇಕಾದ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು;

(vii) ಈ ಅಧಿನಿಯಮ ಮತ್ತು ಪರಿನಿಯಮಗಳಲ್ಲಿ ಉಪಬಂಧಿಸುವಂತೆ ಪ್ರಾಧಿಕಾರಗಳು ಮತ್ತು ಸಮಿತಿಗಳಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡುವುದು;

(viii) ವಿಶ್ವವಿದ್ಯಾನಿಲಯಕ್ಕೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡುವುದು; ಮತ್ತು

(ix) ವಿಶ್ವವಿದ್ಯಾಲಯದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಅಪೇಕ್ಷಣೀಯವೆಂದು ಕಂಡುಬರುವಂಥ ತೀರ್ಮಾನಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುವುದು.

(7) ಆಡಳಿತ ಮಂಡಳಿಯು ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಸಲ ಅಥವಾ ಅಗತ್ಯಪಡಿಸಬಹುದಾಂಥೆ ಹಲವು ಬಾರಿ ಸಭೆ ಸೇರತಕ್ಕದ್ದು.

(8) ಆಡಳಿತ ಮಂಡಳಿಯು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು.

ಸರ್ಕಾರಿ ಮುದ್ರಣಾಲಯ, ಕ್ಯಾಂಪ್ ಬೆಳಗಾವಿ, ಪಿ.7, ಕಾಸೂ , ಪ್ರತಿಗಳು 300, 15 ಡಿಸೆಂಬರ್2024

**KARNATAKA LEGISLATIVE COUNCIL**
**ONE HUNDRED AND FIFTY FOURTH SESSION**

# THE CHANAKYA UNIVERSITY (AMENDMENT) BILL, 2024

**(LA Bill No. 46 of 2024)**
**(As passed by the Karnataka Legislative Assembly)**

A Bill to amend the Chanakya University Act, 2021.

Whereas it is expedient to amend the Chanakya University Act, 2021 (Karnataka Act No.37 of 2021) for the purposes hereinafter appearing;

Be it enacted by the Karnataka State Legislature in the Seventy Fifth year of the Republic of India as follows:-

**1. Short title and commencement.-** (1) This Act may be called the Chanakya University (Amendment) Act, 2024.

(2) It shall come in to force at once.

**2. Amendment of section 26.-** In the Chanakya University Act, 2021 (Karnataka Act No.37 of 2021), in section 26,-

(a) in sub-section (1), after clause (viii), the following shall be inserted, namely:-

“(ix) One expert from the field of management or finance or any other specialization, including administration to be nominated by the State Government.”

(b) in sub-section (3), the word “two”, shall be omitted.

## STATEMENT OF OBJECTS AND REASONS

**(As appended to at the time of introduction)**

It is considered necessary to amend the Chanakya University Act, 2021 (Karnataka Act No. 37 of 2021) to nominate one special expert from respective field by the State Government to the Board of Governors.

Hence, the Bill.

## FINANCIAL MEMORANDUM

There is no extra expenditure involved in the proposed measure.

**Dr. M C SUDHAKAR**
Minister for Higher Education

**K.R. MAHALAKSHMI**
Secretary
Karnataka Legislative Council

## ANNEXURE

### EXTRACT FROM THE CHANAKYA UNIVERSITY ACT, 2021 (KARNATAKA ACT NO.37 OF 2021)

**xxx** **xxx** **xxx**

**26. The Board of Governors.-** (1) The Board of Governors shall consist of the following, namely:-

(i) The Chancellor - Chairperson;

(ii) The Pro-Chancellor - Member;

(iii) The Vice-Chancellor - Member;

(iv) The Principal Secretary or Secretary to the State Government in the Higher Education, Medical Education or his nominee not below the rank of Deputy Secretary - Ex–officio Member;

(v) One expert from industry or from the field of management, finance or any other specialized field, including administration to be nominated by the Sponsoring body - Member; 24

(vi) Five eminent persons, nominated by the Sponsoring body – Members (vii) The Pro Vice-Chancellor (s) who shall be non-voting member; and

(vii) One eminent educationist nominated by University Grants Commission – Member.

(2) The Registrar shall be a non-voting Secretary of the Board of Governors;

(3) The tenure of office of the members of the Board of Governors, appointment of members, other than two Government nominees, renewal and removal, etc., shall be such as may be laid down by the Statutes;

(4) All meetings of the Board of Governors shall always be chaired by the Chancellor and in his absence by any one of the nominees of the Chancellor. If Chancellor has not nominated any person to preside any meeting, members present in the meeting shall elect the person who shall preside that meeting only from among themselves by a simple majority;

(5) Quorum for all meetings of the Board of Governors shall be Five members attending and voting at such meeting: Provided that, the presence of either the Chancellor or one nominee of the Sponsoring Body and in the absence of the Chancellor or one nominee of Sponsoring Body, the Vice Chancellor, shall always be necessary to form the quorum for any meeting of the Board of Governors;

(6) The Board of Governors shall be the Principal Governing Body of the University and shall have the following powers, namely:-

(i) to lay down policies to be pursued by the University;

(ii) to review decisions of the other authorities of the University if they are not in conformity with the provisions of this Act, or the Statutes or the Rules; or the Ordinances;

(iii) to approve the Budget and Annual Report of the University;

(iv) to make new or additional Statutes or amend or repeal the earlier Statutes, Rules and Ordinances;

(v) to recommend voluntary winding up of the University to the Sponsoring body;

(vi) to approve proposals for submission to the Government;

(vii) to nominate members to the Authorities and Committees as provided for in the Act and Statutes;

(viii) to appoint the Statutory Auditors of the University; and

(ix) to take such decisions and steps as are found desirable for effectively carrying out the objects of the University.

(7) The Board of Governors shall meet at least four times a year or as many times as may be required.

(8) The Board of Governors shall meet at such time and place as may be specified by the Statutes.

**xxx** **xxx** **xxx**

Govt. Press, Suvarna Vidhana Soudha, Belagavi camp, 16th Dec, 2024, P7, W.D. , Copies 300